ಶ್ರೀ ಡಿ. ಬಿ. ಇನಾಂದಾರ್.—ಮಾನ್ಯ ಅಧ್ಯಕ್ಷರೇ, ಆ ಡಾಕ್ಟರನ್ನು ಅಂದರೆ ಶ್ರೀ ರಾಘವೇಂದ್ರ ಹೆಬ್ಬಾರ್ ಅವರನ್ನು ಟೆಂಪರ್ವರಿಯಾಗಿ ಪೋಸ್ಟ್ ಮಾಡಿತ್ತು. ಅನಂತರ ಅವರನ್ನು ಪಿ. ಹೆಚ್. ಯು. ಪಣಜಿಗೆ ಡೆಪ್ಯೂಟ್ ಮಾಡಿದರು. ಅನಂತರ ಅವರ ಬದಲಿಗೆ ಡಾಕ್ಟರ್. ಸಿದ್ದಲಿಂಗಯ್ಯ ಅವರನ್ನು ಪೋಸ್ಟ್ ಮಾಡಿತ್ತು. ಮತ್ತೆ ಹಿಂದೆ ಇದ್ದ ಡಾ. ರಾಘವೆಂದ್ರ ಹೆಬ್ಬಾರ್ ಅವರನ್ನೇ ದಿನಾಂಕ ೩೦-೧-೮೬ ರಲ್ಲಿ ಪೋಸ್ಟ್ ಮಾಡಲಾಗಿದೆ.

ಬಿಜಾಪುರ ಜಿಲ್ಲೆಯಲ್ಲಿನ ಪೋಲೀಸ್ ಕಲ್ಯಾಣ ನಿಧಿಯ ಬಗ್ಗೆ

೧೮೧೦. ಶ್ರೀ ಎಂ. ಎಲ್. ಉಸ್ತಾದ್ (ಬಿಜಾಪುರ).—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ

ಅ) ಪೋಲೀಸ್ ಕಲ್ಯಾಣ ನಿಧಿಗೆ ಬಿಜಾಪುರ ಜಿಲ್ಲೆಯಲ್ಲಿ ಸಂದಾಯವಾದ ಹಣವೆಷ್ಟು ? (ತಾಲ್ಲೂಕಾವಾರ ವಿವರ ಕೊಡುವುದು)

ಆ) ಪೋಲೀಸ್ ಕಲ್ಯಾಣ ನಿಧಿ ವಸೂಲಿಯಲ್ಲಿ ಅಥವಾ ಸಂಗ್ರಹಿಸುವಾಗ ಅಕ್ರಮಗಳಾದದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಆ ಬಗ್ಗೆ ಏನಂ ಕ್ರಮಂ ಕೈಗೊಳ್ಳಲಾಗಿದೆ ?

ಶ್ರೀ ಬಿ, ರಾಚಯ್ಯ (ಗೃಹ ಮಂತ್ರಿಗಳು)

ಅ) ಬಿಜಾಪುರ ಜಿಲ್ಲೆಯಲ್ಲಿ ಪೋಲೀಸ್ ಕಲ್ಯಾಣ ನಿಧಿಗೆ ಒಟ್ಟು ೧೫,೧೨,೦೭೦-೦೦ ರೂ.ಗಳನ್ನು ಸಂಗ್ರಹಿಸಲಾಗಿದೆ.

ತಾಲೂಕಾವಾರ ವಿವರಗಳು ಈ ರೀತಿ ಇವೆ

೧.	ಬಿಜಾಪುರ	೩,೦೧,೨೫೮-೦೦
೨.	ಇಂಡಿ	೭೫,೮೫೨-೦೦
೩.	ಶಿಂದಗಿ	೮೭,೧೫೦-೦೦
೪.	ಮುದ್ದೆಬಿಹಾಳ್	೮೧,೨೫೦-೦೦
೫.	ಮುಧೋಳ	೨,೮೯,೨೪೦-೦೦
೬.	ಬಾಗಲಕೋಟೆ	೧,೩೯,೮೧೦-೦೦
೭.	ಬಾಗೇವಾಡಿ	೬೩,೪೭೦-೦೦
೮.	ಜಮಖಂಡಿ	೨,೬೪,೯೪೭-೦೦
೯.	ಹುನಗುಂದ	೯೪,೦೧೦-೦೦
೧೦.	ಬೀಳಗಿ	೨೮,೬೭೭-೦೦
೧೧.	ಬಾದಾಮಿ	೯೧,೪೦೫-೦೦
	ಒಟ್ಟು	೧೫,೧೨,೦೭೦-೦೦

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಎಂ. ಎಲ್. ಉಸ್ತಾದ್.—ಸನ್ಮಾನ್ಯ ಅಧ್ಯಕ್ಷರೇ, ತವಂಗೆ ಗೊತ್ತಿರುವ ಹಾಗೆ ಈ ಸಲವೂ ನಮ್ಮ ಜಿಲ್ಲೆಯಲ್ಲಿ ಭಾ ಬರಗಾಲ ಇರುವಂಥಾ ಈ ಒಂದು ಸಮಯದಲ್ಲಿ ಪೋಲೀಸಿನವರು ಏನು ಮಾಡಿದ್ದಾರೆಂದರೆ ಯಾರು ಈ ಪೋಲೀಸ್ ಕಲ್ಯಾಣ ನಿಧಿಗೆ ಹಣ ಕೊಡುವುದಿಲ್ಲವೋ ಅಂಥಾವರ ಬಗ್ಗೆ ಅಕ್ರಮಗಳನ್ನು ನಡೆಸುತ್ತಿದ್ದಾರೆ. ಇವರು ಎಂತೆಂತಹ ಅಕ್ರಮಗಳನ್ನು ನಡೆಸುತ್ತಿದ್ದಾರೆಂದರೆ, ಈ ಪೊತ್ತಿನ ದಿವಸ ಸಮಾಜ ಘಾತುಕ ಶಕ್ತಿಗಳು ಯಾರು ಇದ್ದಾರೋ ಅಂಥಾವರ ಕಡೆಗೆ ಹೋಗಿ ಇದಕ್ಕೆ

ಹಣವನ್ನು ವಸೂಲ್ಮಾಡುತ್ತಿದ್ದಾರೆ ಅಷ್ಟೇ ಅಲ್ಲ ಈ ಟ್ರಕ್ ಓನರ್ಸ್ ಏನು ಇದ್ದಾರೆ ಅವರನ್ನೂ ಬಿಡದೆ ಹಣ ಕೊಡಿರಿ ಎಂದು ವಸೂಲ್ಮಾಡುತ್ತಿದ್ದಾರೆ. ಅವರು ಹಣ ಕೊಟ್ಟರೆ ಸರಿ ಇಲ್ಲದೇ ಹೋದರೆ ಅವರ ಟ್ರಕ್ ಅನ್ನು ಸೀಜ್ ಮಾಡುತ್ತಾರೆ. ಹೀಗೆ ಮಾಡಿ ಅವರು ಲಕ್ಷಾಂತರ ರೂಪಾಯಿ ಹಣ ವಸೂಲಿ ಮಾಡುವ ಕೆಲಸ ನಡೆದಿದೆ. ಈ ಒಂದು ಕೆಲಸ ನಮ್ಮ ಜಿಲ್ಲೆಯು ಒಂದುಲ್ಲೇ ನಡೆದಿಲ್ಲ, ಇಡೀ ರಾಜ್ಯದಲ್ಲಿ ಎಲ್ಲಾ ಕಡೆಯೂ ನಡೆಯುತ್ತಾ ಇದೆ. ನಾನು ಇಡೀ ರಾಜ್ಯದ ಪ್ರಶ್ನೆಯನ್ನು ಈ ವಿಚಾರದಲ್ಲಿ ವಿತಕ್ಕೆ ಕೇಳಲಿಲ್ಲ ಎಂದರೆ ತಾವು ಇಂತಹ ಪ್ರಶ್ನೆಯನ್ನು ಸ್ಟಾರ್ಡ್ ಪ್ರಶ್ನೆ ಇರುವುದನ್ನು ಅನ್‌ಸ್ಟಾರ್ಡ್ ಪ್ರಶ್ನೆಯನ್ನಾಗಿ ಮಾಡಿಬಿಡುತ್ತೀರಿ, ಆದ್ದರಿಂದ ನನ್ನ ಜಿಲ್ಲೆಮಟ್ಟಿಗೆ ಈ ಪ್ರಶ್ನೆಯನ್ನು ಹಾಕಿದೆ. ತಾವು ನನ್ನ ಪ್ರಶ್ನೆ (ಅ) ಗೆ ಉತ್ತರವಾಗಿ ಇದರಿಂದ ಒಟ್ಟು ೧೫,೧೨,೦೭೦-೦೦ ರೂ. ವಸೂಲಾಗಿದೆ ಅಂತ ಹೇಳಿದ್ದೀರಿ. ನನಗೆ ತಿಳಿದ ಮಟ್ಟಿಗೆ ಇವರು ಸಂಗ್ರಹ ಮಾಡಿದ ಒಟ್ಟು ಹಣ ಸುಮಾರು ೩೦ ರಿಂದ ೩೨ ಲಕ್ಷ ರೂಪಾಯಿನವರೆಗೆ ಸಂಗ್ರಹವಾಗಿದೆ. ಇವರು ಯಾವ ರೀತಿ ಹಣ ವಸೂಲ್ಮಾಡುತ್ತಾರೆ ಎನ್ನುವುದನ್ನು ನಾನು ಒಂದು ಉದಾಹರಣೆಯನ್ನು ಕೊಡುತ್ತೇನೆ. ಮುಧೋಳ್ ತಾಲ್ಲೂಕಿನಲ್ಲಿ ಮಹಾಲಿಂಗಪ್ಪ ಅವರು ಎಕ್ಸ್ ಪ್ರೆಸಿಡೆಂಟ್ ಅವರ ಹತ್ತಿರ ಇವರು ಹೋಗಿ ೧೦ ಸಾವಿರ ರೂಪಾಯಿ ಕೇಳಿದರು. ಅವರು ಈ ಸಾರಿ ಬರಗಾಲ ಇದೆ, ಆದುದರಿಂದ ನಾನು ಇದಕ್ಕೆ ೨ ಸಾವಿರ ರೂಪಾಯಿ ಕೊಡುತ್ತೇನೆ, ಮಯ್ಯಿರಿ, ನಾನು ೧೦ ಸಾವಿರ ರೂಪಾಯಿ ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದರು. ಅದಕ್ಕೆ ಈ ಪೋಲೀಸಿನವರು ಏನು ಮಾಡಿದರು ಎಂದರೆ ಅವರ ಹತ್ತಿರ ಇದ್ದಂಥಾ ರಿವಾಲ್ವಾರ್ ಅನ್ನು ಜಪ್ತಿ ಮಾಡಿ ತೊಂದರೆ ಕೊಟ್ಟರು. ಈ ಪೋಲೀಸ್ ಅಧಿಕಾರಿಗಳೇ ಹೋಗಿ ಹೀಗೆ ಮಾಡಿದ್ದಾರೆ. ಹಾಗೆಯೇ ಜಮಖಂಡಿ ತಾಲ್ಲೂಕಿನಲ್ಲೂ ನಡೆದಿದೆ. ನಿಮ್ಮ ಪಕ್ಷದ ಶಾಸಕರಿಗೆ ಈ ವಿಚಾರ ಗೊತ್ತಿದ್ದರೂ ಸಹ ಇಂತಹ ಪ್ರಶ್ನೆಯನ್ನು ಕೇಳುವುದಿಲ್ಲ ಎಂದು ಹೇಳುತ್ತಾರೆ ಅವರೇ ಈ ಪ್ರಶ್ನೆಯನ್ನು ನೀವೇ ಹಾಕಿ ಎಂದು ನಮ್ಮ ಮುಂದೆ ಬಂದು ಹೇಳಿದ್ದಾರೆ. ಆದ್ದರಿಂದ ನಾನು ಈ ಪ್ರಶ್ನೆಯನ್ನು ಕೇಳಿದ್ದೀನಿ. ನಾನು ಈ ಸಂದರ್ಭದಲ್ಲಿ ತಮ್ಮನ್ನು ಕೇಳುವುದು ಇಷ್ಟೆ ಇದರ ಬಗ್ಗೆ ಏನಾದರೂ ಎಕ್‌ಕ್ವೈರಿ ಮಾಡಿಸುತ್ತೀರಾ ಹೇಗೆ ?

ಶ್ರೀ ಬಿ. ರಾಚಯ್ಯ.—ಮಾನ್ಯ ಸದಸ್ಯರು ಯಾವುದಾದರೂ ನಿರ್ದಿಷ್ಟವಾಗಿರತಕ್ಕಂಥಾ ಉದಾಹರಣೆಗಳನ್ನು ಕೊಟ್ಟರೆ ಅವುಗಳನ್ನು ವಿಚಾರಣೆಮಾಡಿಸುತ್ತೇನೆ, ಅಷ್ಟೇ ಅಲ್ಲ ಅದನ್ನು ವಿಜಿಲೆನ್ಸ್ ಕಮೀಷನ್‌ಗೂ ಕಳಿಸಿಕೊಡುತ್ತೇನೆ.

ರಾಜ್ಯದಲ್ಲಿ ವೈದ್ಯಕೀಯ ವಿಜ್ಞಾನದ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವ ಬಗ್ಗೆ

೬೦೮. ಶ್ರೀಮತಿ ಮುಂಕ್ತರುನ್ನಿಸ (ನರಸಿಂಹರಾಜ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ

ಅ) ರಾಜ್ಯದಲ್ಲಿ ವೈದ್ಯಕೀಯ ವಿಜ್ಞಾನಗಳ ವಿಶ್ವ ವಿದ್ಯಾನಿಲಯವನ್ನು ಸ್ಥಾಪಿಸಲು ದಿನಾಂಕ ೨೧-೧೧-೮೧ ರಂದು ನಡೆದ ಹಿಂದಿನ ಸಚಿವ ಸಂಪುಟದ ಸಭೆಯಲ್ಲಿ ತಿರ್ಮಾನ ಕೈಗೊಂಡಿರುವುದು ಸರ್ಕಾರಕ್ಕೆ ಗೊತ್ತಿದೆಯೇ ?

ಆ) ಹಾಗಿದ್ದರೆ ಈ ದಿಶೆಯಲ್ಲಿ ಸರ್ಕಾರವು ಕೈಗೊಂಡ ಕ್ರಮಗಳೇನು ?

ಇ) ಈ ವಿಶ್ವ ವಿದ್ಯಾನಿಲಯವನ್ನು ಯಾವಾಗ ಸ್ಥಾಪಿಸಲಾಗುವುದು.

ಈ) ಈ ಉದ್ದೇಶಕ್ಕಾಗಿ ಎಷ್ಟು ಹಣ ಮೀಸಲಿಡಲಾಗಿದೆ.

ಡಾ. ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಈ ಪ್ರಸ್ತಾವನೆ ಸರ್ಕಾರದ ಗಮನದಲ್ಲಿದೆ.

ಆ) ಈ ವಿಷಯವು ಪರಿಶೀಲನೆಯಲ್ಲಿದೆ.

ಇ) ಈ ಹಂತದಲ್ಲಿ ಯಾವುದೇ ನಿರ್ದಿಷ್ಟ ಉತ್ತರ ಹೇಳಲು ಸಾಧ್ಯವಿರುವುದಿಲ್ಲ.

ಈ) ಇಲ್ಲಿಯವರೆಗೆ ಇದಕ್ಕಾಗಿ ಹಣವನ್ನು ಮೀಸಲಿಟ್ಟಿಲ್ಲ.